1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 1504 /2023 **ಚಾಸಾಃ(3) ಪ್ರಾಸಾ (2 )**

ದಿನಾಂಕಃ **24-03-2026** ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಪ್ರಭುರಾಜ |
| ತಂದೆ ಹೆಸರು | ಗವಿಸಿದ್ದನಗೌಡ ಮಾಲಿಪಾಟೀಲ |
| ವಯಸ್ಸು | 59 ವರ್ಷ, |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಚುಕ್ಕನಕಲ್ಲ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ಮೃತ ರಂಜಿತ ಚಾಸಾ-1 ಮತ್ತ ಚಾಸಾ-5 ಪರಿಯವಿದೆ. ಆರೋಪಿಯ ಪರಿಚಯ ನನಗೆ ಇರುವುದಿಲ್ಲ. ಮೃತ ರಂಜಿತ ಹೇಗೆ ಮೃತ ಹೊಂದಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಮತ್ತು ನಾನು ಯಾವುದೇ ಹೇಳಿಕೆ ನೀಡಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೆ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿ ನಿಪಿ-2(ಬಿ ಎಂದು ಗುರುತಿಸಲಾಯಿತು. ನಿಪಿ-3 ಮತ್ತು 4 ರಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 19-3-2023 ರಂದು ನಾನು,ಚಸಾ-5 ಮತ್ತು ಮೃತ ರಂಜಿತ ಬೆಳಿಗ್ಗ 10 ಗಂಟೆಗೆ ಜಮಿನಿನ ಕೆಲಸಕ್ಕೆ ಹೋಗಿದ್ದೆವು, ಸಾಯಂಕಾಲ 5-30 ಕ್ಕೆ ನಾನು ಮತ್ತು ಚಾಸಾ-4 ಮತ್ತು ಮೃತ ರಂಜಿತ ಮೂವರು ಸೇರಿಕೊಂಡು ಕೊಪ್ಪಳದಿಂದ ಮುದ್ದಾಬಳ್ಳಿಗೆ ಹೋಗುವ ರಸ್ತೆಯಲ್ಲಿ ಅಟೋ ಕಾಯುತ್ತಾ ನಿಂತಿದ್ದಾಗ ಆಗ ಕೆಎ-37/ಬಿ-5274 ಪಾಸೆಂಜರ ಅಟೋದಲ್ಲಿ ನಾವು 3 ಜನ ಹತ್ತಿಕೊಂಡು ಸ್ವಲ್ಪ ದೂರ ಬಂದಾಗ ಆರೋಪಿ ಸದರಿ ಅಟೋವನ್ನು ಅತೀವೇಗ ಮತ್ತ ಅಜಾಗರೂಕತೆಯಿಂದ ತಗ್ಗುದಿಣ್ಣೆ ನೋಡದೇ ಚಲಾಯಿಸಿದ್ದರಿಂದ ನಿಧಾನವಾಗಿ ಚಲಾಯಿಸಿ ಎಂದು ಹೇಳಿದರೂ ಕೇಳದೇ ಅತೀವೇಗವಾಗಿ ಅಟೋವನ್ನು ಚಲಾಯಿಸಿದ್ದು ಮೃತ ಮೃತ ರಂಜಿತ ಆಯತಪ್ಪಿ ಪುಟಿದ್ದು ಕೆಳಗೆ

ಬಿದ್ದಿದ್ದು ಆಗ ನಾನು ಅದನ್ನು ನೋಡಿ ಚಾಸಾ-1 ರವರಿಗೆ ತಿಳಿಸಿದ್ದು ಚಾಸಾ-1 ರವರು ಸ್ಥಳಕ್ಕೆ ಬಂದರು ಅಂದರೆ ಸರಿಯಲ್ಲ.ದಿಃ 22-3-2023 ರಂದು ಸಂಜೆ 6 ಗಂಟೆಗೆ ಚಿಕಿತ್ಸೆ ಫಲಿಸದೇ ರಂಜಿತಾ ಮೃತಪಟ್ಟಿರುತ್ತಾಳೆ ಅಂದರೆ ಸರಿಯಲ್ಲ. ಸದರಿ ವಿಷಯವಾಗಿ ಚಾಸಾ-1 ರವರು ದಿಃ 23-3-2023 ರಂದು ನಿಪಿ-1 ರಂತೆ ದೂರು ದಾಖಲಿಸಿರುತ್ತಾರೆ ಸರಿಯಲ್ಲ. ಅದೇದಿನ ಬೆಳಿಗ್ಗೆ 10-30 ರಿಂದ 11-30 ರ ಸಮಯಿದಲಿ ನನ್ನ ಮತ್ತು ಚಾಸಾ-2 ರವರ ಸಮಕ್ಷವಮ ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿ ಆಟೋ ಅಮಾನತ್ತು ಪಡಿಸಿಕೊಂಡು ನನ್ನ ಸಹಿ ಪಡೆದಿದ್ದಾರೆ ಅಂದರೆ ಸರಿಯಲ್ಲ. ಮತ್ತು ನಿಪಿ-3 ಮತ್ತು 4 ರಂತೆ ಪೋಟೋ ತೆದಿದ್ದಾರೆಅಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯುನ್ನು ನಿಪಿ-5 ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗಳಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ಏನೂ ಇಲ್ಲ.

**ಮರು ವಿಚಾರಣೆ ಇಲ್ಲ.**

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

**1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.**